ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಥೈಲಾಂಡ್ ದೇಶದ ಖ್ಲೋಂಗ್ ಖುಯಿನ್‌ನಲ್ಲಿ ನಿಂತಿರುವ ವಿಶ್ವದ ಅತಿ ಎತ್ತರದ (30ಮೀ) ಕಂಚಿನ ಗಣೇಶ ಪ್ರತಿಮೆ. 'ಫ್ರಾ ಫಿಕಾನೆಟ್' ಎಂಬ ಹೆಸರು ಪಡೆದ ಸಿದ್ಧಿ–ಬುದ್ಧಿದಾಯಕ, ವಿಘ್ನನಿವಾರಕ ದೇವತೆಯಾದ ಗಣೇಶನನ್ನು ಬೌದ್ಧ ನಾಡಾದ ಥೈಲಾಂಡಿನ ಜನರು ಶ್ರದ್ಧೆಯಿಂದ ಆರಾಧಿಸುತ್ತಾರೆ.


ಸಂಪುಟ : 43 ಸಂಚಿಕೆ : 03 ಪ್ಲವ – ಭಾದ್ರಪದ ಕಲಿಯುಗಾಬ್ದ 5123 15-09-2021 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಮತ್ತೆ ತಲೆಯೆತ್ತಿದ ತಾಲಿಬಾನ್

## ಜಾಗತಿಕ ಭಯೋತ್ಪಾದನೆಯ ಇನ್ನೊಂದು ಹೆಜ್ಜೆ

ಆಫ್ಘಾನಿಸ್ಥಾನ ಈಗ ಮತ್ತೆ ಸುದ್ದಿಯಲ್ಲಿದೆ. ಆದರೆ ಅದು ಅವರ ಅಂತಾರಾಷ್ಟ್ರೀಯ ಖ್ಯಾತಿಯ ಕ್ರಿಕೆಟ್ ತಂಡದಿಂದಾಗಲೇ ಅಥವಾ ಉದಯೋನ್ಮುಖ ಫುಟ್ಬಾಲ್ ತಂಡದಿಂದಾಗಲೀ ಅಲ್ಲ, ಬದಲಿಗೆ ಕುಖ್ಯಾತ ತಾಲಿಬಾನ್‌ನಿಂದಾಗಿ. ಅಮೇರಿಕದ ಸೈನ್ಯ ಆಫ್ಘಾನಿಸ್ಥಾನದಿಂದ ಹಿಂದಿರುಗಲು ಸಿದ್ಧವಾಗುತ್ತಿದ್ದಂತೆಯೇ, ತಾಲಿಬಾನಿಗಳು ಯಾವುದೇ ವಿರೋಧವಿಲ್ಲದೇ ದೇಶದ ಅಧಿಕಾರವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದು ಇಡೀ ಪ್ರಪಂಚವನ್ನು ನಿಬ್ಬೆರಗಾಗಿಸಿದೆ. ಸೂಪರ್ ಪವರ್ ಎಂದೆನಿಸಿಕೊಂಡ ಅಮೇರಿಕ 2002ರಿಂದ ಜೂನ್ 2021 ರವರೆಗೆ ಆಫ್ಘಾನಿಸ್ಥಾನದ ಭದ್ರತೆಗಾಗಿ 88.61 ಬಿಲಿಯನ್ ಡಾಲರ್, ಆಡಳಿತ ಮತ್ತು ಅಭಿವೃದ್ಧಿಗಾಗಿ 36.29 ಬಿಲಿಯನ್ ಡಾಲರ್, ಮಾನವೀಯ ನೆರವಿಗಾಗಿ 4.18 ಬಿಲಿಯನ್ ಡಾಲರ್, ಇತರೆ ಕಾರ್ಯಾಚರಣೆಗಾಗಿ 15.91 ಬಿಲಿಯನ್ ಡಾಲರ್ ಸೇರಿದಂತೆ ಒಟ್ಟು 144.98 ಬಿಲಿಯನ್ ಡಾಲರ್ ಹಣ ವ್ಯಯಿಸಿದೆ. ಆಫ್ಘಾನಿಸ್ಥಾನದ ಬಜೆಟ್ಟಿನ ಸುಮಾರು 80% ಖರ್ಚನ್ನು ಅಮೆರಿಕವೇ ಭರಿಸುತ್ತಿತ್ತು. ಅಮೆರಿಕದ ಹಣಕಾಸಿನ ನೆರವಿಲ್ಲದೆ ತಮ್ಮ ಸರ್ಕಾರವು ಆರು ತಿಂಗಳ ಕಾಲ ಕೂಡಾ ಸೈನ್ಯದ ನಿರ್ವಹಣೆ ಮಾಡಲು ಸಾಧ್ಯವಿಲ್ಲ ಎಂದು ಈ ಹಿಂದೆ ಸಾರ್ವಜನಿಕವಾಗಿಯೇ ಆಫ್ಘಾನಿಸ್ಥಾನದ ಅಧ್ಯಕ್ಷರಾಗಿದ್ದ ಅಶ್ರಫ್ ಘನಿ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಧುನಿಕ ಶಸ್ತ್ರಾಸ್ತ್ರ ಮತ್ತು ಅವನ್ನು ಬಳಸುವ ತರಬೇತಿಯನ್ನು ಆಫ್ಘಾನ್ ಸೇನೆಗೆ ಕೊಡುವ ಮೂಲಕ ಇಂತಹ ಸಂಧಿಗ್ಧ ಪರಿಸ್ಥಿತಿಯನ್ನು ನಿಭಾಯಿಸಲು ಆಫ್ಘಾನಿಸ್ತಾನವನ್ನು ಅಮೇರಿಕ ಸಜ್ಜುಗೊಳಿಸಬೇಕಾಗಿತ್ತು ಎಂಬುದೇ ಎಲ್ಲರ ಅಭಿಪ್ರಾಯವಾಗಿದೆ.




ಕಳೆದ ಕೆಲವು ದಿನಗಳಿಂದ, ಕಾಬೂಲ್ ವಿಮಾನ ನಿಲ್ದಾಣಡಾ ಮೂಲಕ ದೇಶಬಿಟ್ಟು ಹೋಗುತ್ತಿರುವವರನ್ನು ನೋಡಿದರೆ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ತಾಲಿಬಾನ್ ಬಂದೂಕುಧಾರಿಗಳು ಕಾಬೂಲ್ ನಗರದ ಬೀದಿ ಬೀದಿಗಳಲ್ಲಿ ತಮ್ಮ ಮಾರಣಾಂತಿಕ ಆಯುಧಗಳೊಂದಿಗೆ ಗಸ್ತು ತಿರುಗುತ್ತಿರುವ ವೀಡಿಯೋಗಳು ಮಾಧ್ಯಮದಲ್ಲಿ ಬಿತ್ತರವಾಗುತ್ತಿವೆ. ಜೊತೆಗೆ, ಮಾಧ್ಯಮಗಳಲ್ಲಿ ನಡೆಯುತ್ತಿರುವ ರಾಜಕೀಯ ವಿಶ್ಲೇಷಣೆಗಳು ಮತ್ತು ಚರ್ಚೆಗಳು ಆ ದೇಶದ ಅನಿಶ್ಚಿತ ಭವಿಷ್ಯವನ್ನು ಸೂಚಿಸುತ್ತಿವೆ. ಮತೀಯ ಮೂಲಭೂತವಾದ ಯಾವ ಮಟ್ಟಕ್ಕೆ ಒಂದು ದೇಶವನ್ನು ಕೊಂಡೊಯ್ಯಬಹುದು ಎಂಬ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ.

1990ರ ದಶಕದಲ್ಲಿ ಪೀಟರ್ ಹಾಪ್ಕಿರ್ಕ್ ಅವರು ಪ್ರಕಟಿಸಿದ್ದ ಗ್ರೇಟ್ ಗೇಮ್: ಆನ್ ಸೀಕ್ರೆಟ್ ಸರ್ವಿಸ್ ಇನ್ ಹೈ ಏಷ್ಯಾ ಎಂಬ ಪುಸ್ತಕವನ್ನು ಓದಿದ್ದವರು, ಆಗಿನ ಸಾಮ್ರಾಜ್ಯಶಾಹಿ ಶಕ್ತಿಗಳು, ರಷ್ಯಾದ ಸಾಮ್ರಾಜ್ಯ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳು ಹೇಗೆ ಮಧ್ಯ ಏಷ್ಯಾದ ಮೇಲೆ ನಿಯಂತ್ರಣವನ್ನು ಹೊಂದುವ ಸಲುವಾಗಿ ಸಂಚನ್ನು ರೂಪಿಸಿದ್ದವು ಎಂಬುದನ್ನು ಅರ್ಥ ಮಾಡಿಕೊಂಡಿರುತ್ತಾರೆ. ಅದರಲ್ಲೂ ವಿಶೇಷವಾಗಿ ಆಫ್ಘಾನಿಸ್ಥಾನದ ಮೇಲೆ ಪ್ರಾಬಲ್ಯ ಸಾಧಿಸುವ ಮೂಲಕ, ಇಡೀ ಏಷ್ಯಾದಲ್ಲಿ ಅಧಿಕಾರ ವಿಸ್ತರಿಸಲು ಸಾಧ್ಯ ಎಂಬುದನ್ನು ಅರಿತಿದ್ದರು. ಅದೇ ರೀತಿ ಭಾರತದಲ್ಲಿ ಎಂಟನೇ ಶತಮಾನದಿಂದ ಮೊಘಲ್ ಸಾಮ್ರಾಜ್ಯ ಪತನವಾಗುವವರೆಗೆ ಕ್ರೂರ ಇಸ್ಲಾಮಿಕ್ ಆಕ್ರಮಣಕಾರರು ಆಫ್ಘಾನಿಸ್ಥಾನದೊಂದಿಗೆ ಪತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಗಳನ್ನು ಹೊಂದಿರುವುದು ನಮಗೆಲ್ಲ ತಿಳಿದ ವಿಚಾರವೇ. ವಿಕೃತಿ ಮತ್ತು ನಿರ್ದಯತೆಗೆ ಹೆಸರುವಾಸಿಯಾಗಿದ್ದ ಬಾಬರ್ 1504 ರಲ್ಲಿ, ಕಾಬೂಲನ್ನು ವಶಪಡಿಸಿಕೊಂಡಿದ್ದಲ್ಲದೇ, ಮುಂದಿನ ಶತಶತಮಾನಗಳ ಕಾಲದ ದಬ್ಬಾಳಿಕೆಗೆ ಅಡಿಪಾಯ ಹಾಕಿ ಹೋಗಿದ್ದನು. ಅವನ ಮರಣಾನಂತರ ಆತನ ಇಚ್ಛೆಯಂತೆ ಬಾಬರನ ದೇಹವನ್ನು ಕಾಬೂಲ್‌ಗೆ ಕೊಂಡೊಯ್ದು ಅಲ್ಲಿನ ಬೆಟ್ಟದ ಪಕ್ಕದಲ್ಲಿ ಹೂಳಲಾಯಿತು. ಹೀಗೆ ಅಫ್ಘಾನಿಸ್ತಾನ ಮತ್ತು ಭಾರತದ ನಡುವೆ ಗಾಢವಾದ ಸಂಬಂಧ ಹೊಸೆದುಕೊಂಡಿದೆ.

1980ರಲ್ಲಿ ಸೋವಿಯತ್ ಪಡೆಗಳ ವಿರುದ್ಧ ಹೋರಾಡಲು ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಅಮೇರಿಕದ ಗುಪ್ತಚರ ಸಂಸ್ಥೆ ಸಿಐಎ ಹುಟ್ಟುಹಾಕಿದ ಈ ತಾಲಿಬಾನಿಗಳು ಮುಂದೆ ಮತಾಧಾರಿತವಾಗಿ ತಮ್ಮದೇ ಆದ ಪ್ರತ್ಯೇಕ ಸೈನ್ಯವೊಂದನ್ನು ಕಟ್ಟಿಕೊಂಡು ಅದರ ಮೂಲಕ 1996ರಲ್ಲಿ ಕಾಬೂಲ್ ನಗರವನ್ನು ವಶಪಡಿಸಿಕೊಂಡಿದ್ದಲ್ಲದೇ, ಅಲ್ಲಿದ್ದ ಮಹಿಳೆಯರು, ಅಮಾಯಕರು, ಸಿಖ್ಖರು, ಹಿಂದೂಗಳು ಮತ್ತು ಇತರೇ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಅಮಾನವೀಯವಾಗಿ ಹೇರಿದ ನಿರ್ಬಂಧಗಳು ನಿಜಕ್ಕೂ ಅತ್ಯಂತ ಹೇಯಕರವಾಗಿದ್ದವು.

ತಾಲಿಬಾನ್ ನಿಯಂತ್ರಣದಲ್ಲಿರುವ ಆಫ್ಘಾನಿಸ್ಥಾನದ ರಹಸ್ಯ ಸ್ಥಳದಿಂದಲೇ ಅಲ್ ಖೈದಾ ನಾಯಕ ಒಸಾಮಾ ಬಿನ್ ಲಾಡೆನ್ ನೇತೃತ್ವದ ತಂಡ 2001ರಲ್ಲಿ ಅಮೇರಿಕಾದ ವಿಶ್ವ ವಾಣಿಜ್ಯ ಕೇಂದ್ರದ ಗೋಪುರಗಳ ಮೇಲೆ ದಾಳಿ ಮಾಡಿದ ನಂತರ ತಾಲಿಬಾನ್ ಮತ್ತು ಅಮೇರಿಕ ಸರ್ಕಾರದ ನಡುವಿನ ಮೈತ್ರಿ ಇದ್ದಕ್ಕಿದ್ದಂತೆ ಕೊನೆಗೊಂಡಿತು. ಅಲ್ಲಿಂದ ಸುಮಾರು ಎರಡು ದಶಕಗಳ ಕಾಲ ಆಫ್ಘಾನಿಸ್ಥಾನ ಸಂಪೂರ್ಣವಾಗಿ ಅಮೇರಿಕದ ತೆಕ್ಕೆಯಲ್ಲಿತ್ತು. ಅಮೇರಿಕದ ಸೈನಿಕರು ಬೇಟೆಗಾರರಂತೆ ಅಲ್ ಖೈದಾ ಸದಸ್ಯರನ್ನು ಬೇಟೆಯಾಡಿದ್ದವು.

1990ರ ತಾಲಿಬಾನ್ ಮತ್ತು ಈಗಿರುವ ತಾಲಿಬಾನ್‌ಗಳು ಅನೇಕ ವಿಷಯಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಅವರು ಈಗ ಮತ್ತಷ್ಟು ಬಲಶಾಲಿಗಳಾಗಿದ್ದಾರೆ. ದೊಡ್ಡ ಮಟ್ಟದ ಆರ್ಥಿಕ ಸಂಪನ್ಮೂಲಗಳಿವೆ, ಹಿಂಸಾಕೃತ್ಯಗಳಲ್ಲಿ ಎರಡು ದಶಕಗಳ ಕಾಲದ ಅನುಭವವಿದೆ. ಹಾಗಾಗಿ ಪ್ರಪಂಚದ ಉಳಿದ ಪ್ರಜಾಪ್ರಭುತ್ವ ರಾಷ್ಟ್ರಗಳು ಇದು ನಮ್ಮ ಸಮಸ್ಯೆಯಲ್ಲ ಎಂದು ಸುಮ್ಮನೇ ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ಈ ಭಯೋತ್ಪಾದಕ ಸಂಘಟನೆ ಪ್ರಪಂಚದ ಮಗ್ಗುಲ ಮುಳ್ಳಾಗಿ ಕಾಡುವುದಂತೂ ಸತ್ಯ. ಆಫ್ಘಾನಿಸ್ಥಾನವನ್ನು ವಶಪಡಿಸಿಕೊಂಡ ಬಳಿಕ ತಾಲಿಬಾನಿನ ವಕ್ತಾರ ಜಬಿಹುಲ್ಲಾ ಮುಜಾಹಿದ್ ತಮ್ಮ ಮೊದಲ ಪತ್ರಿಕಾಗೋಷ್ಠಿಯಲ್ಲಿ ತಾವು ಮೊದಲಿನಂತೆ ಇರದೇ ಬಹಳಷ್ಟು ಬದಲಾಗಿದ್ದೇವೆ, ಮಹಿಳೆಯರ ಹಕ್ಕುಗಳನ್ನು ಗೌರವಿಸುತ್ತೇವೆ, ಹಿಂದಿನ ಸರ್ಕಾರದ ಪರವಾಗಿ ಕೆಲಸ ಮಾಡಿದವರನ್ನು ಕ್ಷಮಿಸುತ್ತೇವೆ, ಮಾಧ್ಯಮಗಳಿಗೆ ಸ್ವಾತಂತ್ರ್ಯವನ್ನುಕೊಡುತ್ತೇವೆ, ನಮ್ಮ ದೇಶ ಭಯೋತ್ಪಾದನಾ ಚಟುವಟಿಕೆಗಳಿಗೆ ತಾಣವಾಗಲು ಬಿಡುವುದಿಲ್ಲ ಎಂಬೆಲ್ಲಾ ಆಶ್ವಾಸನೆಗಳನ್ನು ಕೊಟ್ಟಿದ್ದಾನೆ. ಅದು ತಮ್ಮ ಮೇಲಿನ ಜಗತ್ತಿನ ದೃಷ್ಟಿಕೋನ ಬದಲಾಗಲಿ ಎಂಬ ಬುದ್ಧಿವಂತ ನಡೆಯಾಗಿತ್ತೇ ಹೊರತು ಅವರಲ್ಲಿ ಯಾವುದೇ ಬದಲಾವಣೆಯನ್ನು ನಿರೀಕ್ಷಿಸಲಾಗದು. ಇದನ್ನು ಪುಷ್ಟೀಕರಿಸುವಂತೆ, ಸುದ್ದಿಗೋಷ್ಠಿಯ ನಂತರದ ಘಟನೆಗಳು, ಅಲ್ಲಿನ ಬೀದಿಗಳಲ್ಲಿ ಜನರನ್ನು ಅನವಶ್ಯಕವಾಗಿ ಹಿಂಸಿಸುತ್ತಿರುವುದು, ಮನೆಗಳ ಮೇಲೆ ಏಕಾಏಕಿ ದಾಳಿ ನಡೆಸುತ್ತಿರುವುದು, ಹಿಂದಿನ ಸರ್ಕಾರದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಮಹಿಳಾ ಪತ್ರಕರ್ತರನ್ನು ಕೆಲಸದಿಂದ ತೆಗೆದಿರುವುದಲ್ಲದೇ ಅಂತಹವರನ್ನು ಹುಡುಕಿ ಹುಡುಕಿ ಶಿಕ್ಷೆ ಕೊಡುತ್ತಿರುವುದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಕ್ಕೂ ಅಲ್ಲಿ ನಡೆಯುತ್ತಿರುವುದಕ್ಕೂ ಅಜಗಜಾಂತರವಾದ ವ್ಯತ್ಯಾಸವಿದೆ ಎನ್ನುವುದನ್ನು ಸಾರಿ ಹೇಳುತ್ತಿವೆ. ಇದಲ್ಲದೇ, ಅವರು ಜಾರಿಗೆ ಮಾಡಲು ಹೊರಟಿರುವ ಶರಿಯಾ ಇಸ್ಲಾಮಿಕ್ ಕಾನೂನುಗಳು ಜನಸಾಮಾನ್ಯರ ಮೇಲೆ ಹೇರುವ ನಿಯಂತ್ರಣ, ಅದರಲ್ಲೂ ನಿರ್ದಿಷ್ಟವಾಗಿ ಮಹಿಳೆಯರನ್ನು ಮತ್ತು ಸ್ಥಳೀಯ ಸಂಸ್ಕೃತಿ, ಆಚರಣೆಗಳು, ಸಂಪ್ರದಾಯಗಳ ಮೇಲೆ ನಿಷ್ಠುರವಾದ ಇಸ್ಲಾಮಿಕ್ ಕಾನೂನನ್ನೂ ತಾಲಿಬಾನ್ ಸರ್ಕಾರ ಅಳವಡಿಸಿಕೊಳ್ಳಲಿದೆ ಎಂದಿರುವುದು ಎಲ್ಲರಲ್ಲೂ ಭಯ ಸೃಷ್ಟಿಸಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಮಹತ್ತ್ವದ ಅಂಶವೆಂದರೆ ತಾಲಿಬಾನ್ ಎಂಬುದು ಜಾಗತಿಕ ಜಿಹಾದಿ ಚಳುವಳಿಯ ಭಾಗವೇ ಆಗಿದೆ. ತಾಲಿಬಾನ್, ಅಲ್ ಖೈದಾ, ಐಸಿಸ್, ಬೊಕೊ ಹರಾಮ್, ಹಕ್ಕಾನಿ ನೆಟ್ವರ್ಕ್, ಜೈಶ್–ಇ–ಮೊಹಮ್ಮದ್, ಲಷ್ಕರ್–ಇ–ತೈಬಾ ಮತ್ತು ಇತರ ಭಯೋತ್ಪಾದಕ ಸಂಘಟನೆಗಳ ಹೆಸರಿಗೆ ಬೇರೆಬೇರೆಯಾಗಿದ್ದರೂ, ಅವರ ಮಹತ್ವಾಕಾಂಕ್ಷೆಗಳು ಒಂದೇ ಆಗಿದೆ. ಅಲ್ ಖೈದಾ ಈಗಾಗಲೇ ತಾನು ತಾಲಿಬಾನ್‌ಗೆ ಅಧೀನ ಎಂದು ಘೋಷಿಸಿಕೊಂಡಿರುವುದಲ್ಲದೇ, ಮುಲ್ಲಾ ಒಮರ್ ಅವರನ್ನು ತಮ್ಮ ನಾಯಕನೆಂದು ಒಪ್ಪಿಕೊಂಡಿರುವುದೆ. ಅಂತೆಯೇ, ಅಲ್ ಖೈದಾದ


*4ನೇ ಪುಟಕ್ಕೆ...*

# ಸಂಸ್ಮರಣೆ ಬೆಳಗೆರೆ ಕೃಷ್ಣಶಾಸ್ತ್ರಿ

ಬೆಳಗೆರೆ ಕೃಷ್ಣಶಾಸ್ತ್ರಿ ಅವರನ್ನು ಓದಿದರೆ ಅಂದಿನ ಗ್ರಾಮೀಣ ಭಾರತದ ಸರಳ-ಸುಂದರ-ನಿಷ್ಕಲ್ಮಶ ವ್ಯಕ್ತಿಗಳ ಬದುಕು; ಶಾಲಾ ಮಟ್ಟದ ಶಿಕ್ಷಕ ವರ್ಗದಲ್ಲಿದ್ದ ಪಾಂಡಿತ್ಯ, ಪಾಠ ಎಂಬುದು ಕೇವಲ ನಾಲ್ಕು ಗೋಡೆಗಳ ಮಧ್ಯೆ ನಡೆಯುವುದಲ್ಲ, ಇಡೀ ಸಮಾಜವೇ ನನ್ನದು ಎಂಬ ವಿಶಾಲ ಮನೋಭಾವ ಎದ್ದು ಕಾಣುತ್ತದೆ. ಅವರೊಬ್ಬ ಶ್ರೇಷ್ಠ ಸಾಹಿತಿಯಷ್ಟೇ ಅಲ್ಲ, ಸಮಾಜದ ಮಾರ್ಗದರ್ಶಕರೂ ಹೌದು.

ಬೆಳಗೆರೆ ಕೃಷ್ಣಶಾಸ್ತ್ರಿಗಳು 1916ರ ಮೇ 22ರಂದು ಚಿತ್ರದುರ್ಗ ಜಿಲ್ಲೆಯ ಬೆಳಗೆರೆಯಲ್ಲಿ ಜನಿಸಿದರು. ತಂದೆ ಆಶುಕವಿ ಚಂದ್ರಶೇಖರ ಶಾಸ್ತ್ರಿಗಳು ಮತ್ತು ತಾಯಿ ಮೋಕ್ಷಗುಂಡಂ ಅನ್ನಪೂರ್ಣಮ್ಮ ಅವರು. ಅಣ್ಣ ಕ್ಷೀರಸಾಗರ ಅವರು ಪ್ರಾಧ್ಯಾಪಕರಾಗಿ ಮತ್ತು ಬರಹಗಾರರಾಗಿ ಹಲವಾರು ನಾಟಕ ಮತ್ತು ಕಾದಂಬರಿಗಳಿಗೆ ಹೆಸರಾದವರು. ಅಕ್ಕ ಬೆಳಗೆರೆ ಜಾನಕಮ್ಮ ಕವಯಿತ್ರಿ, ತಂಗಿ ಬೆಳಗೆರೆ ಪಾರ್ವತಮ್ಮ ಸಂಗೀತ, ಗಮಕ ಕಲಾವಿದೆ.

ಬೆಳಗೆರೆ ಕೃಷ್ಣಶಾಸ್ತ್ರಿಗಳ ಪ್ರಾಥಮಿಕ ವಿದ್ಯಾಭ್ಯಾಸ ಹಳ್ಳಿಯಲ್ಲಿ ನೆರವೇರಿತು. ಮೆಟ್ರಿಕ್ ಪಾಸಾದ ನಂತರ ಕೆಲಕಾಲ ಶಾನುಭೋಗರಾಗಿದ್ದು ಅಧ್ಯಾಪಕ ವೃತ್ತಿಗೆ ಸೇರಿದರು. ಚಳ್ಳಕೆರೆಯಲ್ಲಿ ಬದಲಿ ಶಿಕ್ಷಕರಾಗಿ ನೌಕರಿ ಹಿಡಿದದ್ದು ಇವರ ಜೀವನದ ಗತಿಯನ್ನೇ ಬದಲಿಸಿತು.

ಇದ್ದಕ್ಕಿದ್ದಂತೆ ಒಂದೇ ದಿನ ಇಬ್ಬರು ಮಕ್ಕಳು, ಹೆಂಡತಿಯನ್ನು ಕಳೆದುಕೊಂಡ ಮನೆಯಲ್ಲಿ ಸ್ಮಶಾನ ಮೌನ. ಸ್ಕೂಲಿಗೆ ರಜೆ ಹಾಕದೆ, ಮನೆಗೆ ಬೀಗ ಹಾಕದೆ ಹಿಮಾಲಯದತ್ತ ಹೊರಟುಬಿಟ್ಟರು. ಉತ್ತರ ಭಾರತ, ದಕ್ಷಿಣೇಶ್ವರ, ತಿರುವಣ್ಣಾಮಲೈ ಹೀಗೆ ಸುತ್ತಿ ಕಡೆಗೆ ಗಾಂಧೀಜಿಯವರ ಭೇಟಿಯಾದರು. "ಅಧ್ಯಾಪನ ಮಾಡಿ ಮಕ್ಕಳಿಗೆ ನಾಲ್ಕಕ್ಷರ ಕಲಿಸು, ಜೀವನ ಸಾರ್ಥಕ ಮಾಡಿಕೋ" ಎಂದ ಅವರ ಮಾತು ಕೇಳಿ ಮತ್ತೆ ಹಳ್ಳಿಗೆ ಬಂದರು.

ಮರಳಿದ ಕೃಷ್ಣಶಾಸ್ತ್ರಿಗಳು ಮೀರಾಸಾಬಿ ಹಳ್ಳಿ, ಹೆಗ್ಗೆರೆ ಮುಂತಾದ ಹಳ್ಳಿಗಳಲ್ಲಿ, ಜನರನ್ನು ಹುರಿದುಂಬಿಸಿ ಪಾಠಶಾಲೆ, ಆಸ್ಪತ್ರೆ ತೆರೆದರು. ಹೊಡೆದೆಯಲ್ಲೆಲ್ಲ ವ್ಯವಸ್ಥಿತ ಶಾಲೆ, ಆಸ್ಪತ್ರೆ ಮುಂತಾದ ಕಟ್ಟಡಗಳ ವ್ಯವಸ್ಥೆಗಳು ರೂಪುಗೊಳ್ಳುವಂತೆ ಮಾಡಿದರು. ಇದಕ್ಕಾಗಿ ಅವರು ಹಳ್ಳಿಗಳಲ್ಲಿ ಜನರ ಮನಸ್ಸುಗಳನ್ನು ಒಂದು ಮಾಡಿ ಉತ್ತಮ ಉದ್ದೇಶಗಳಲ್ಲಿ ಪಾಲ್ಗೊಳ್ಳಲು ನಾ ಮೊದಲು ತಾ ಮೊದಲು ಎಂದು ಬರುವಂತೆ ಮಾಡಿದ್ದು ಒಂದು ಅಪೂರ್ವ ಸೊಗಸಿನದು. ಅಣ್ಣ ಕ್ಷೀರಸಾಗರರ ಹೆಸರಿನಲ್ಲಿ ಬೆಳಗೆರೆಯಲ್ಲಿ ಶಾಲೆ ಕಟ್ಟಿದರು. ಹಲವು ನೂರು ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ಇರುವ ಶಾಲೆ ನಿರ್ಮಿಸಿದರು. ತಾವು ಮಾತ್ರ ಗುಡಿಸಲಲ್ಲಿ ಜೀವಿಸಿದರು.

ನಾಟಕ, ಪ್ರವಚನ, ಕನ್ನಡದ ಪ್ರಾಚೀನ ಕವಿಗಳ ಸಾಹಿತ್ಯೋತ್ಸವ, ಜಾನಪದ ಉತ್ಸವ, ಸಾಹಿತಿಗಳ ಉಪನ್ಯಾಸ, ಗ್ರಾಮೀಣ ಸಾಂಸ್ಕೃತಿಕ ಉತ್ಸವಗಳನ್ನು ಏರ್ಪಡಿಸಿ ಹಳ್ಳಿಗಳಲ್ಲಿ ಸಾಂಸ್ಕೃತಿಕ ಸಾಮರಸ್ಯಗಳ ಜಾಗೃತಿಯನ್ನುಂಟು ಮಾಡುವಲ್ಲಿ ಮಹತ್ವದ ಪಾತ್ರವಹಿಸಿದರು.



ಜೊತೆಗೆ ಅಲ್ಲಿನ ಜನಸಮುದಾಯದಲ್ಲಿ ಬದುಕನ್ನು ಉನ್ನತ ಧ್ಯೇಯ ಸಾಧನೆಗಳತ್ತ ಹೊರಳುವಂತೆ ಮಾಡಿಕೊಳ್ಳಲು ಸಂಚಲನವನ್ನು ತಂದರು.

ಅವರು ದೊಡ್ಡವರಲ್ಲಿ ಕಂಡ 'ಸರಳತೆ' ಒಂದು ವಿಶಿಷ್ಟವಾದರೆ ಅವರು ಸರಳ ಜನ ಸಾಮಾನ್ಯರಲ್ಲಿ ಕಾಣುವ 'ದೊಡ್ಡತನ' ಇನ್ನೂ ಮೇರುಮಟ್ಟದ್ದು. ಈ ನಿಟ್ಟಿನಲ್ಲಿ ಅವರ 'ಮರೆಯಲಾದೀತೆ?' ಕೃತಿ ಅಮೂಲ್ಯವಾದದ್ದು. ಸಿರಿಯಜ್ಜಿ ಅಂತಹ ಅನನ್ಯ ಜಾನಪದ ಗಾಯಕಿಯೇ ಅಲ್ಲದೆ ಗ್ರಾಮೀಣ ಬದುಕಿನಲ್ಲಿನ ಸಾಂಸ್ಕೃತಿಕ ಮತ್ತು ಕಲಾತ್ಮಕ ಬದುಕನ್ನು ಮೈಗೂಡಿಸಿಕೊಂಡ ಅನೇಕರನ್ನು ಶಾಸ್ತ್ರಿಗಳು ಭಾರತೀಯ ಶ್ರೇಷ್ಠ ವಿದ್ವಾಂಸರಿಗೆ ಮಾತ್ರವಲ್ಲದೆ ವಿದೇಶಿ ವಿದ್ವಾಂಸರಿಗೆ ಸಹಾ ಪರಿಚಯ ಮಾಡಿಕೊಟ್ಟಿದ್ದಾರೆ. ಇಲ್ಲಿ ಕಳ್ಳನಾದ ಕಳ್ಳಿಂಗ ಎಂಬುವನಲ್ಲೂ ಮೈತುಂಬ ಒಡವೆ ಧರಿಸಿದ ಹೆಣ್ಣು ಮಗುವನ್ನು ಮನೆಗೆ ಬಿಟ್ಟು ಜಾಗರೂಕವಾಗಿರುವಂತೆ ಸೂಚಿಸುವ ಸಾಚಾತನವಿದೆ. ಮರಳ ಮೇಲೆ ಅಕ್ಷರ ಕಲಿತ ಸಿದ್ದಯ್ಯ ಶಾಲೆಯ ಸಾಮಾನ್ಯ ಉಪಾಧ್ಯಾಯರೇ ಆಗಿದ್ದರೂ ಅವರು ತೆರೆದು ತೋರುವ ವಿದ್ವತ್ತು, ಪ್ರಾಮಾಣಿಕತೆ, ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ, ಶಿಕ್ಷಕರನ್ನೂ ಬೆಳೆಸಿದ ರೀತಿ ಮನಮುಟ್ಟುತ್ತದೆ. ರಾಜ್ ಕುಮಾರ್ ಅವರಿಗೂ ಮೊಟ್ಟ ಮೊದಲ ಬಾರಿಗೆ ಬಣ್ಣ ಹಚ್ಚಿ, ಗುರುಸ್ಥಾನ ಪಡೆದಿದ್ದ ಚಿನ್ನಪ್ಪನಂತ ಕಲಾವಿದ ಇಲ್ಲಿ ಬೆಳಗಿದ್ದಾರೆ. ಬಡತನದಲ್ಲಿದ್ದರೂ ಮಕ್ಕಳಿಗೆ ಅರ್ಥವಾಗಲೆಲ್ಲ ಎಂದು ಆ ಹುಡುಗನ ಮನೆಗೆ ಹೋಗಿ ಬೋಧಿಸಿದ ಹುಸೇನ್ ಸಾಬಿ, ಆತ ಮರಣವನ್ನಪ್ಪಿದ್ದಾಗ ಆತನಿಗೆ ಯಾರು ಯಾರು ಸಹಾಯ ಮಾಡಿದ್ದರೋ ಅವರನ್ನೆಲ್ಲಾ ಆತನ ಡೈರಿಯಲ್ಲಿ ಗುರುತಿಸಿ ಅವರನ್ನು ಹುಡುಕಿ ತನ್ನ ಕಷ್ಟದ ಸಂಪಾದನೆಯಲ್ಲಿ ಸಾಲ ತೀರಿಸಿದ ಆತನ ಪತ್ನಿ ಹುಸೇನಮ್ಮ ಅಂತಹ ವ್ಯಕ್ತಿಗಳ ಬಗ್ಗೆ ಏನು ತಾನೇ ಹೇಳುವುದು. 1940ರ ದಶಕದಲ್ಲೇ ಕೈ ಬರಹದಲ್ಲಿ ಏಕಾಕಿಯಾಗಿ ನಿಘಂಟು ಸಿದ್ಧಪಡಿಸಿದ ಅಲಿ ಸಾಬ್, ಪ್ರಾಣ ಒತ್ತೆಯಿಟ್ಟು ಹೋರಾಡಿ ಬ್ರಿಟಿಷರಿಂದ ಶಿಕ್ಷೆ ಅನುಭವಿಸಿದ್ದರೂ ತನ್ನ ಕಷ್ಟಕಾಲದಲ್ಲಿಯೂ ಸರಕಾರದ ಮಾಸಾಶಾಸನಕ್ಕೆ ಕೈಯೊಡ್ಡಲು ನಿರಾಕರಿಸಿದ ಪಾರವ್ವ, ಆದರ್ಶ ಶಿಕ್ಷಕ ಸಣ್ಣ ತಿಮ್ಮಯ್ಯ, ಶಾಲೆಯ ಕಟ್ಟಡಕ್ಕಾಗಿ ತಮ್ಮ ಮೌಲ್ಯಯುತ ಭೂಮಿಯನ್ನು ಕೊಟ್ಟ ಹನುಮಣ್ಣಗಳು, ತಮ್ಮ ಬಳಿ ಶಾಲೆ ಕಟ್ಟಡಕ್ಕೆ ದುಡ್ಡು ಕೇಳಲಿಲ್ಲ ಎಂದು ಕೋಪಿಸಿ ಹಣಕೊಟ್ಟ ತಿಮ್ಮಪ್ಪಯ್ಯ, ಸಣ್ಣಪ್ಪಯ್ಯ, ಊರಿಗಾಗಿ ದುಡಿದ ಉಪದ್ರವದಿಂದ ಊರೇ ಖಾಲಿಯಾದರೂ ಊರಿಗೆ ಕಾವಲಾಗಿ ನಿಂತ ಮಹಮದ್ ಹಯಾತ್ ಸಾಬ್, ಒರಟನಾದರೂ ಶಾಲೆಯ ಕೈಂಕರ್ಯಕ್ಕೆ ಹಗಲಿರುಳೂ ದುಡಿದು ಸಂತಸಪಟ್ಟ ಹೆಗ್ಗೆರೆಯ ಗಗ್ಗರಂಗಪ್ಪ, ತನಗೆ ಹಾದಿಯಲ್ಲಿ ಸಿಕ್ಕ ಬಹುಮೊತ್ತವನ್ನು ಯಾವುದೇ ಮೋಹವಿಲ್ಲದೆ ತಂದುಕೊಟ್ಟ ಎಮ್ಮೆ ತಮ್ಮಗ, ಹೃದಯವಂತೆ ವೈದ್ಯೆ ಗಿರಿಜಮ್ಮ, ಪ್ರಾಣ ಉಳಿಸಿದರೂ ತಾನು ನೀಡಿದ ಚಹಾಗೆ ಮಾತ್ರಾ ಕಾಸು ಪಡೆದ ಗಂಗಾರಾಮ್ ಹೀಗೆ ಅನೇಕ ವಿಶಿಷ್ಟ ವ್ಯಕ್ತಿಗಳು ಒಂದಾದ ನಂತರ ಒಂದರಂತೆ ಈ ಕೃತಿಯಲ್ಲಿ ನಮಗೆ ಸಂತಸದ ದಿಗ್ಭ್ರಮೆ ಮೂಡಿಸುತ್ತಾರೆ.


ಮಹಾತ್ಮಾ ಗಾಂಧೀಜಿ, ರಮಣ ಮಹರ್ಷಿ, ಜೆ. ಕೃಷ್ಣಮೂರ್ತಿ, ರಾನಡೆ, ರಾಮದಾಸರು, ವಿದ್ಯಾನಂದ ತ್ರಿಪಾಠಿ, ಜನಾರ್ದನ ಮಿಶ್ರ, ಇಚ್ಛಾಮರಣಿ ಗುಂಜ್ಜಪ್ಪ, ರಾಮೇಗೌಡ, ಕಣ್ಣಮ್ಮ, ಕರಡಿಗವಿ ಅಜ್ಜಯ್ಯ, ಸೇವಾತ್ರಮದ ಲಿಂಗಣ್ಣ, ಮುಕುಂದೂರು ಸ್ವಾಮಿಗಳು, ಸಂಗಯ್ಯ ಸ್ವಾಮಿಗಳು ಮುಂತಾದ ವ್ಯಕ್ತಿಗಳ ಕುರಿತಾದ ಬೆಳಗೆರೆ ಕೃಷ್ಣಶಾಸ್ತ್ರಿಗಳ ಜ್ಞಾನ ಅರ್ಥ್ಯಕೆಗಳು ಇನ್ನೊಂದು ತೆರನಾದದ್ದು. ಅವರು ಆಧ್ಯಾತ್ಮವೆಂಬ ಪದವನ್ನು ಬಳಸದೆಯೇ, ತಮ್ಮನ್ನು ಯಾವುದೇ ಗುಂಪಿಗೆ ಸೀಮಿತಗೊಳಿಸಿಕೊಳ್ಳದೆಯೇ, ವಿಶಾಲ ಮನಸ್ಸಿನಿಂದ ಎಲ್ಲ ತತ್ವಗಳಾಚೆ ನಿಂತು ತಮ್ಮ ಬದುಕಿನ ಪ್ರತಿ ನಡೆಯಲ್ಲೂ ಆಧ್ಯಾತ್ಮದಂತಹ ಶ್ರೇಷ್ಠ ಬಾಳನ್ನೇ ಬಾಳಿದ ವ್ಯಕ್ತಿತ್ವದ ವಿಶಿಷ್ಟ ಮಜಲು ನಮ್ಮ ಅನುಭವಕ್ಕೆ ಕಾಣಿಸುತ್ತದೆ.

ತುಂಬಿ (ಕವನ ಸಂಕಲನ), ಯೇಗ್ದಾಗೆಲ್ಲಾ ಐತೆ (ಶ್ರೀ ಮುಕುಂದೂರು ಸ್ವಾಮಿಗಳನ್ನು ಕುರಿತ ನೆನಪು), ಹಳ್ಳಿಚಿತ್ರ, ಹಳ್ಳಿಮೇಷ್ಟ್ರು, ಪದ್ಮಿನಿ, ಪಾಶುಪತಾಸ್ತ್ರ, ಏಕಲವ್ಯ, ಸೋಹ್ರಾಬ್ ರುಸ್ತುಂ (ನಾಟಕಗಳು), ಸಾಹಿತಿಗಳ ಸ್ಮೃತಿ, ಮರೆಯಲಾದೀತೆ, ಎಲೆಯಮರೆಯ ಅಲರು (ನೆನಪುಗಳು) ಮುಂತಾದವು ಬೆಳಗೆರೆ ಕೃಷ್ಣಶಾಸ್ತ್ರಿಗಳ ಪ್ರಕಟಿತ ಕೃತಿಗಳು. ಚಿನ್ಮಯ ಎಂಬುದು ಅವರಿಗೆ ಅರ್ಪಿತವಾದ ಸಂಭಾವನಾ ಗ್ರಂಥ.

ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ರಾಜ್ಯ ಮತ್ತು ಕೇಂದ್ರದ ಅತ್ಯುತ್ತಮ ಅಧ್ಯಾಪಕ ಪ್ರಶಸ್ತಿ, ಹಳ್ಳಿ ಚಿತ್ರ ನಾಟಕಕ್ಕೆ ಕೇಂದ್ರ ನಾಟಕ ಅಕಾಡಮಿ ಪ್ರಶಸ್ತಿ, ಆಕಾಶವಾಣಿ ಪುರಸ್ಕಾರ, ಅಳಸಿಂಗಾಚಾರ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮುಂತಾದ ಅನೇಕ ಗೌರವಗಳು ಅರಸಿ ಬಂದಿದ್ದವು.

ಆದರ್ಶಮಯ ಬಾಳ್ವೆ ಬಾಳಿದ ಬೆಳಗೆರೆ ಕೃಷ್ಣಶಾಸ್ತ್ರಿಗಳು 2013ರ ಮಾರ್ಚ್ 23ರಂದು ತಮ್ಮ 97ನೇ ವಯಸ್ಸಿನಲ್ಲಿ ಈ ಲೋಕವನ್ನಗಲಿದರು.

## ಪುಸ್ತಕ ಪರಿಚಯ




ಮರಾಠಿ ಮೂಲ: ಸ್ವಾತಂತ್ರ್ಯವೀರ ಸಾವರ್ಕರ್ ಅವರ 'ಕಾಳೇ ಪಾಣೀ'
ಕನ್ನಡಾನುವಾದ: ಗಿರಿಜಾ ಶಾಸ್ತ್ರಿ
ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ
ಬೆಲೆ: ರೂ.90

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದ ಹಲವು ಪ್ರಥಮಗಳ ಹರಿಕಾರ ವಿನಾಯಕ ದಾಮೋದಾರ ಸಾವರ್ಕರ್. ಸ್ವಾತಂತ್ರ್ಯದ ಕ್ರಾಂತಿಯ ಕಿಡಿ ಹೊತ್ತಿಸಿದ ಅವರು ಸ್ವಾತಂತ್ರ್ಯವೀರರೆಂದರೇ ಬಿರುದಾಂಕಿತರಾದರು. ಭಾರತದ ಸ್ವಾತಂತ್ರ್ಯಲಕ್ಷ್ಮಿಯನ್ನು ಪ್ರಸನ್ನಗೊಳಿಸಲೋಸುಗ ಅವರು ನಡೆಸಿದ ತಪಸ್ಸಿಗೆ ಬ್ರಿಟಿಷರಿಂದ ಸಿಕ್ಕ ಪ್ರತಿಫಲ 50 ವರ್ಷಗಳ ಕಾಲಾಪಾನಿಯ ಕಠಿಣ ಕಾರಾಗೃಹ ಶಿಕ್ಷೆ.

ಅದೇ ಅಂಡಮಾನ್ 'ಕಾಲಾಪಾನಿ' ಕಾರಾಗೃಹ ವ್ಯವಸ್ಥೆಯ ಹಿನ್ನೆಲೆಯನ್ನೇ ವಸ್ತುವಾಗಿರಿಸಿಕೊಂಡ ಒಂದು ವೈಶಿಷ್ಟ್ಯಪೂರ್ಣ ಕಾದಂಬರಿ ಸಾವರಕರ್ ರಚಿಸಿದ 'ಕಾಳೇ ಪಾಣೀ'. ಅಂಡಮಾನ್ ಬದುಕಿನ ಹತ್ತುಹಲವು ಮಗ್ಗುಲುಗಳ ಮತ್ತು ಹಲವಾರು ಜನರ ಜೀವನದ ಮೇಲೆ ಅದು ಬೀರಿದ ಪರಿಣಾಮಪರಂಪರೆಯ ಚಿತ್ರಣ ಇದರಲ್ಲಿದೆ. ಆಕಾರದಲ್ಲಿ ಕಾಲ್ಪನಿಕ ಕಥೆಯಾದರೂ ಈ ಕಾದಂಬರಿಯ ಮುಖ್ಯ ಎಳೆಗಳು ವಾಸ್ತವಾನುಭವದಿಂದ ಹೊಮ್ಮಿದ್ದವೇ. ಶೃಂಗಾರ, ವೀರ, ಕರುಣ ಮೊದಲಾದ ಎಲ್ಲ ರಸಗಳೂ ಈ ಕಾದಂಬರಿಯಲ್ಲಿ ಪ್ರದರ್ಶನಗೊಂಡಿವೆ. ಸಾವರಕರರ ಬದುಕು-ಬರಹಗಳನ್ನು ಹೊಸ ಪೀಳಿಗೆಯ ಓದುಗರಿಗೆ ಸಂಕ್ಷಿಪ್ತ ರೂಪದಲ್ಲಿಯಾದರೂ ಪರಿಚಯಿಸುವ ಆಶಯದಿಂದ ಸಿದ್ಧಗೊಂಡ ಅನುವಾದಿತ ಕನ್ನಡಾವೃತ್ತಿ 'ಕರಿನೀರ ರೌರವ'.

ರಾಷ್ಟ್ರೀಯ ವಿಚಾರಗಳ ಗ್ರಂಥಗಳಿಗಾಗಿ ಭೇಟಿ ನೀಡಿ: www.sahityabooks.com

## ಎಲ್ಲೋ ಕೇಳಿದ ಕಥೆ

ಓರ್ವ ಶಿಷ್ಯ ತನ್ನ ಗುರುವನ್ನು 'ದೇವರನ್ನು ಕಾಣುವ ವಿಧಾನವನ್ನು ತಿಳಿಸಿ' ಎಂದು ಪದೇ ಪದೇ ಪೀಡಿಸುತ್ತಿದ್ದ. ಶಿಷ್ಯನಲ್ಲಿ ಇನ್ನೂ ಪಕ್ವತೆ ಬಂದಿಲ್ಲ ಎಂದು ಅರಿತಿದ್ದ ಗುರು ಆತನ ಪ್ರಶ್ನೆಯನ್ನು ನಿರ್ಲಕ್ಷ ಮಾಡುತ್ತಿದ್ದ. ಹೀಗೆ ಶಿಷ್ಯ ದುಂಬಾಲು ಬೀಳುವುದು ಮುಂದುವರಿದಾಗ 'ಸರಿ ಇಂದು ನಿನಗೆ ದೇವರನ್ನು ಕಾಣುವ ವಿಧಾನವನ್ನು ತಿಳಿಸುತ್ತೇನೆ. ಅದಕ್ಕೂ ಮೊದಲು ಸ್ನಾನ ಮಾಡಿ ಶುದ್ಧರಾಗಬೇಕು' ಎನ್ನುತ್ತ ಶಿಷ್ಯನನ್ನು ಕರೆದುಕೊಂಡು ಒಂದು ಸರೋವರಕ್ಕೆ ಬಂದ. ಸುಮಾರು ಎದೆಮಟ್ಟ ನೀರಿಗೆ ಈರ್ವರೂ ಇಳಿದ ಕೂಡಲೇ ಇದ್ದಕ್ಕಿದ್ದಂತೇ ಶಿಷ್ಯನನ್ನು ಪಟ್ಟುಹಿಡಿದು ನೀರಿನಲ್ಲಿ ಮುಳುಗಿಸಿ ಒತ್ತಿ ಹಿಡಿದ. ಹೀಗೆ ಒಂದು ಅರೆಕ್ಷಣ ನೀರಿನಲ್ಲಿ ಮುಳುಗಿದ ಕೂಡಲೇ ಶಿಷ್ಯ ಒದ್ದಾಡತೊಡಗಿದ್ದ. ನೀರಿನಿಂದ ಮೇಲೆದ್ದು ಉಸಿರೆಳೆದುಕೊಂಡು ಬದುಕುಳಿಯಬೇಕು ಎಂದು ತಪ್ಪಿಸಿಕೊಂಡು ಉಸಿರೆಳೆದುಕೊಳ್ಳಲು ಹಾತೊರೆಯತೊಡಗಿದ. ಅಷ್ಟರಲ್ಲೇ ಶಿಷ್ಯನನ್ನು ಮೇಲೆತ್ತಿದ ಗುರು ಕೇಳಿದ 'ನೀನು ನೀರಿನಲ್ಲಿ ಮುಳುಗಿದ್ದಾಗ ಏನೆನ್ನಿಸಿತು?' ಶಿಷ್ಯನೆಂದ 'ನಾನು ಸತ್ತೇ ಹೋಗುತ್ತೇನೆ ಎಂದು ಭಾವಿಸಿದೆ. ಒಂದು ಉಸಿರಿನ ಗಾಳಿಗಾಗಿ ಹಾತೊರೆದೆ' ಆಗ ಗುರು ಹೇಳಿದ 'ನಿನಗೆ ದೇವರ ವಿಷಯದಲ್ಲಿಯೂ ಹೀಗೆ ವ್ಯಾಕುಲತೆ ಬಂದರೆ ಅದೇ ಆತನನ್ನು ಕಾಣುವ ವಿಧಾನ'.

ಇದು ಎಲ್ಲ ಸಾಧನೆಗೂ ಮಾರ್ಗವಾಗುವ ವಿಧಾನ. ಗುರಿ ಮುಟ್ಟಬೇಕು ಎನ್ನುವ ವ್ಯಾಕುಲತೆ, ತೀವ್ರವಾದ ಬಯಕೆಯೇ ಸಾಧನೆಗೆ ಅಡಿಪಾಯ.




ನಾಳೆ ಬರುವುದು ನಮಗಿಂದೆ ಬರಲಿ,
ಇಂದು ಬರುವುದು ನಮಗೀಗಲೆ ಬರಲಿ; ಆಗೀಗ ಎನ್ನದಿರೊ,
ಚೆನ್ನಮಲ್ಲಿಕಾರ್ಜುನಾ.

– ಅಕ್ಕಮಹಾದೇವಿ

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನೀಲ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸತ್ಯನಾರಾಯಣ ಶಾನಭಾಗ

ದೇಶದಲ್ಲಿ ವ್ಯಾಪಾರ ವಹಿವಾಟು ಜಗತ್ತಿನಲ್ಲಿ ಸುಮಾರು 2.5 ಕೋಟಿ ದೊಡ್ಡ ಪ್ರಮಾಣದಲ್ಲಿ ಇರುವ ಚಿಲ್ಲರೆ ಮತ್ತು ಸಗಟು ವ್ಯಾಪಾರಿಗಳಿಗೆ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ(ಎಂಎಸ್‌ಎಂಇ) ಮಾನ್ಯತೆ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದುವರೆಗೆ ಚಿಲ್ಲರೆ ಮತ್ತು ಸಗಟು ವ್ಯಾಪಾರಗಳು ತಯಾರಿಕಾ ಅಥವಾ ಸೇವಾ ಘಟಕಗಳ ಅಡಿಯಲ್ಲಿ ಬರದ ಕಾರಣ ಅವುಗಳನ್ನು ಎಂಎಸ್‌ಎಂಇ ವರ್ಗದಿಂದ ಹೊರಗಿಡಲಾಗಿತ್ತು. ಇದೀಗ ಎಂಎಸ್‌ಎಂಇ ಮಾನ್ಯತೆಯಿಂದ ವ್ಯಾಪಾರಿಗಳು ಎಂಟರ್‌ಪ್ರೈಸ್ ನೋಂದಣಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ ದೊರೆಯಲಿದ್ದು ಕಳೆದ ಒಂದು ವರ್ಷದಲ್ಲಿ ಎಂಎಸ್‌ಎಂಇ ವಲಯಕ್ಕೆ ಘೋಷಿಸಲಾಗಿರುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ಲಭ್ಯವಾಗಲಿದೆ. ದೇಶದ ಜಿಡಿಪಿಗೆ ಎಂಎಸ್‌ಎಂಇ ವಲಯದ ಕೊಡುಗೆ ಶೇ29ಕ್ಕಿಂತ ಹೆಚ್ಚು ಎನ್ನುವುದು ಗಮನಿಸಬೇಕಾದ ಸಂಗತಿ.




2014ರಲ್ಲಿ ಜಾರಿಗೆ ಬಂದ ಪ್ರಧಾನಿ ಮೋದಿಯವರ ಮಹತ್ವಾಕಾಂಕ್ಷಿ ಜನ್‌ಧನ್ ಯೋಜನೆ ದೇಶದ ಬಹುದೊಡ್ಡ ಜನಸಂಖ್ಯೆಯನ್ನು ಬ್ಯಾಂಕ್ ಆಧಾರಿತ ಆರ್ಥಿಕ ಸೇವೆಗಳ ಒಳಗೆ ತರುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ಯೋಜನೆ ಜಾರಿಯಾಗಿ ಏಳು ವರ್ಷಗಳ ನಂತರದ ಅಂಕಿ ಅಂಶಗಳನ್ನು ಗಮನಿಸುವುದಾದರೆ ಇದುವರೆಗೆ ಜನ್‌ಧನ್ ಅಡಿಯಲ್ಲಿ 42 ಕೋಟಿ ಖಾತೆಗಳನ್ನು ತೆರೆಯಲಾಗಿದೆ, 31 ಕೋಟಿ ಖಾತೆದಾರರಿಗೆ ರುಪೇ ಕಾರ್ಡ್ ನೀಡಲಾಗಿದೆ, ರೂ.1.4ಲಕ್ಷ ಕೋಟಿಯಷ್ಟು ಬೃಹತ್ ಮೊತ್ತ ಈ ಖಾತೆಗಳಲ್ಲಿ ಪ್ರಸ್ತುತ ಜಮೆಯಾಗಿರುವ ಮೊತ್ತ. 2 ಲಕ್ಷ ಬ್ಯಾಂಕ್ ಮಿತ್ರರು ದೇಶದಾದ್ಯಂತ ಈ ಯೋಜನೆಯಡಿ ಸೇವೆ ಒದಗಿಸುತ್ತಿದ್ದಾರೆ. ರುಪೇ ಕಾರ್ಡ್‌ಗಳ ಮೂಲಕ 2 ಲಕ್ಷ ರೂ ಉಚಿತ ಅಪಘಾತ ವಿಮೆ, 10 ಸಾವಿರ ರೂ ಓವರ್‌ಡ್ರಾಫ್ಟ್ ಸೌಲಭ್ಯ ಒದಗಿಸಿದೆ. ಬ್ಯಾಂಕ್ ಖಾತೆ ಆಧಾರ್ ಜೋಡಣೆಯೊಂದಿಗೆ ನಗದು ನೇರ ವರ್ಗಾವಣೆ ಯೋಜನೆಯಿಂದಾಗಿ ರೂ.17.44 ಲಕ್ಷ ಕೋಟಿ ಮೊತ್ತ ಅರ್ಹ ಫಲಾನುಭವಿಗಳ ಖಾತೆಗೆ ಜಮೆಯಾಗಿದೆ ಇದರಿಂದ ಲಕ್ಷಾಂತರ ಕೋಟಿ ಹಣ ಪೋಲಾಗುವುದು ತಪ್ಪಿದೆ.

ಗೋವು ಭಾರತದ ಸಂಸ್ಕೃತಿಯ ಭಾಗವಾಗಿದ್ದು, ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಗೋ ಕಳ್ಳತನ, ಹತ್ಯೆಗೆ ಸಂಬಂಧಿಸಿದಂತೆ ಪ್ರಕರಣವೊಂದನ್ನು ವಿಚಾರಣೆ ನಡೆಸಿದ ಕೋರ್ಟ್, 'ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವ, ಗೋ ಹತ್ಯೆ ಮಾಡುವವರನ್ನು ಶಿಕ್ಷಿಸುವ ನಿಟ್ಟಿನಲ್ಲಿ ಸಂಸತ್ತು ಕಾನೂನು ಕ್ರಮ ಕೈಗೊಳ್ಳಬೇಕು. ಮತ್ತು ಗೋವು ಭಾರತೀಯ ಸಂಸ್ಕೃತಿಯ ಭಾಗ. ದೇಶದ ಸಂಸ್ಕೃತಿಗೆ ಧಕ್ಕೆಯಾಗುವುದು ದೇಶವು ದುರ್ಬಲವಾಗುವುದಕ್ಕೆ ಕಾರಣವಾಗುತ್ತದೆ. ಗೋ ಮಾಂಸ ಭಕ್ಷಣೆ ಮೂಲಭೂತ ಹಕ್ಕು ಅಲ್ಲ. ಅದನ್ನು ಹತ್ಯೆ ಮಾಡುವ ಹಕ್ಕು ಯಾರಿಗೂ ಇಲ್ಲ' ಎಂದು ಹೇಳಿದೆ.




ಕೃಷಿ ಕ್ಷೇತ್ರದ ಹೊಸ ಆವಿಷ್ಕಾರಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ದೇಶದ ಕೃಷಿ ವಲಯವನ್ನು ಪ್ರಗತಿಯತ್ತ ಕೊಂಡೊಯ್ಯುವ ಯೋಜನೆಯ ಅಂಗವಾಗಿ ಕೇಂದ್ರ ಕೃಷಿ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಗಳು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಸಹಯೋಗದಲ್ಲಿ 'ಕಿಸಾನ್ ಸಾರಥಿ' ಹೆಸರಿನ ಡಿಜಿಟಲ್ ಪ್ಲಾಟ್‌ಫಾರ್ಮ್ ಆರಂಭಿಸಿವೆ. ಈ ವೇದಿಕೆಯ ಮೂಲಕ ಸುಲಭವಾಗಿ ರೈತರು ತಮ್ಮ ಭಾಷೆಯಲ್ಲಿಯೇ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳುವುದರ ಜೊತೆಗೆ ತಮ್ಮ ಬೆಳೆಗಳನ್ನು ಮಾರಾಟ ಮಾಡಲೂ ಸಾಧ್ಯವಾಗುತ್ತದೆ.

ಪ್ರಾಚೀನ ಭಾರತೀಯ ಗ್ರಂಥಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ತಿರುಕ್ಕುರುಳ್, ಭಗವದ್ಗೀತೆಗಳನ್ನು ರಕ್ಷಣಾ ಅಧಿಕಾರಿಗಳ ತರಬೇತಿಯ ಭಾರತೀಯ ಮಿಲಿಟರಿ ಪಠ್ಯಕ್ರಮದಲ್ಲಿ ಸೇರಿಸುವಂತೆ ಸಿಕಂದರಾಬಾದ್‌ನ ಕಾಲೇಜ್ ಆಫ್ ಡಿಫೆನ್ಸ್ ಮ್ಯಾನೇಜ್ಮೆಂಟ್ ಶಿಫಾರಸು ಮಾಡಿದೆ. ಸೇನಾ ಉಪಕರಣಗಳು, ಶಸ್ತ್ರಾಸ್ತ್ರಗಳು ಸೇರಿದಂತೆ ಭಾರತೀಯ ರಕ್ಷಣಾ ವಲಯದಲ್ಲಿಯೂ ಭಾರತೀಯತೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರ, ಭಗವದ್ಗೀತೆಯಲ್ಲಿ ಹೇಳಿರುವ ಯುದ್ಧತಂತ್ರಗಳು ಪ್ರಸ್ತುತ ಸನ್ನಿವೇಶಗಳಿಗೂ ಹೆಚ್ಚು ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ರಕ್ಷಣಾ ತರಬೇತಿಗೆ ಸಂಬಂಧಿಸಿದಂತೆ ಇಂತಹ ಪೌರಾಣಿಕ ಗ್ರಂಥಗಳನ್ನು ಪಠ್ಯಕ್ರಮಗಳನ್ನಾಗಿ ಬೋಧಿಸುವುದು ಸೂಕ್ತ ಎಂದು ತನ್ನ ಶಿಫಾರಸ್ಸಿನಲ್ಲಿ ತಿಳಿಸಿದೆ.




ಪೂರ್ವ ಲಡಾಕಿನ ಕೇಲಾ ಕಣಿವೆ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ 18,600 ಅಡಿ ಎತ್ತರದಲ್ಲಿ ನಿರ್ಮಿಸಲಾಗಿರುವ ವಿಶ್ವದ ಅತ್ಯಂತ ಎತ್ತರದ ರಸ್ತೆಯನ್ನು ಲಡಾಕ್ ಸಂಸದ ನಾಮ್‌ಗ್ಯಾಲ್ ಉದ್ಘಾಟಿಸಿದರು. ಭಾರತೀಯ ಭೂಸೇನೆಯ 58ನೇ ಇಂಜಿನಿಯರಿಂಗ್ ರೆಜಿಮೆಂಟ್ ನಿರ್ಮಿಸಿರುವ ಈ ರಸ್ತೆ ಕೇಲಾ ಪಾಸ್ ಮೂಲಕ ಹಾದು ಹೋಗುತ್ತಿದ್ದತ ಲೇಹ್ ಮತ್ತು ಪ್ಯಾಂಗಾಂಗ್ ಸರೋವರದ ನಡುವೆ 41ಕಿಮೀಯಷ್ಟು ದೂರವನ್ನು ಕಡಿಮೆ ಮಾಡಲಿದೆ.

## ಸಾಲುದ್ದದ ಸುದ್ದಿಗಳು



ತೆಲಂಗಾಣ ರಾಜ್ಯದ ವಾರಂಗಲ್ ಸಮೀಪದ ಮುಲುಗು ಜಿಲ್ಲೆ ಪಾಲಂಪೇಟೆಯಲ್ಲಿರುವ ರುದ್ರೇಶ್ವರ ದೇವಸ್ಥಾನ ಮತ್ತು ಗುಜರಾತಿನ ಹರಪ್ಪ ನಗರದ ಧೋಲಾವೀರಾ ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ ಸೇರಿವೆ. 13ನೇ ಶತಮಾನದ ವಿಶಿಷ್ಟ ವಾಸ್ತುಶಿಲ್ಪದ ಪಾಲಂಪೇಟೆಯ ರಾಮಲಿಂಗೇಶ್ವ ಸ್ವಾಮಿ ಪೂಜಿಸಲ್ಪಡುವ ರುದ್ರೇಶ್ವರ ದೇವಸ್ಥಾನ ವಾಸ್ತುಶಿಲ್ಪಿ ರಾಮಪ್ಪ ಅವರ ಹೆಸರಿನಿಂದಲೂ ಪ್ರಸಿದ್ಧವಾಗಿದೆ. ಹಾಗೆಯೇ ಗುಜರಾತಿನ ಕಚ್‌ನಲ್ಲಿರುವ ಧೋಲಾವೀರಾ ಪುರಾತನ ಹರಪ್ಪ ಸಂಸ್ಕೃತಿಯ ಐದು ಬೃಹತ್ ತಾಣಗಳಲ್ಲೊಂದಾಗಿದೆ. ಭಾರತದಲ್ಲಿ ಇಂದು 40ಕ್ಕೂ ಹೆಚ್ಚು ಯುನೆಸ್ಕೋ ಪಟ್ಟಿಯಲ್ಲಿರುವ ವಿಶ್ವ ಪಾರಂಪರಿಕ ತಾಣಗಳಿವೆ.

ಒಂದು ಮಹತ್ವದ ಸಂಶೋಧನೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಚಂದ್ರಯಾನ್-2 ಮಿಶನ್ ಅಡಿಯಲ್ಲಿ ಚಂದ್ರನ ಕಕ್ಷೆಗೆ ಸೇರಿಸಲ್ಪಟ್ಟು ಸುತ್ತುತ್ತಿರುವ ಆರ್ಬಿಟರ್ ಚಂದ್ರನ ಮೇಲ್ಮೈಯಲ್ಲಿ ನೀರಿನ ಅಂಶ ಇರುವುದನ್ನು ಪತ್ತೆ ಮಾಡಿದೆ. ಈ ಸಂಶೋಧನೆಯ ವಿವರಗಳು ಕರೆಂಟ್ ಸೈನ್ಸ್ ನಿಯತಕಾಲಿಕೆಯಲ್ಲಿ ಪ್ರಕಟವಾಗಿವೆ.


ಆಯುಷ್ ಸಚಿವಾಲಯದ ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯು ಸ್ವಾತಂತ್ರ್ಯದ ಅಮೃತ್ ಮಹೋತ್ಸವದ ಅಂಗವಾಗಿ ದೇಶದಲ್ಲಿ ಔಷಧೀಯ ಸಸ್ಯಗಳ ಕೃಷಿಯನ್ನು ಉತ್ತೇಜಿಸಲು ದೇಶಾದ್ಯಂತ ಮುಂದಿನ ಒಂದು ವರ್ಷದಲ್ಲಿ 75,000 ಹೆಕ್ಟೇರ್ ಭೂಮಿಯಲ್ಲಿ ಔಷಧೀಯ ಸಸ್ಯಗಳ ಕೃಷಿಯನ್ನು ನಡೆಸುವ ರಾಷ್ಟ್ರೀಯ ಅಭಿಯಾನವನ್ನು ಆರಂಭಿಸಿದೆ. ಈ ಪ್ರಯತ್ನವು ದೇಶದಲ್ಲಿ ಔಷಧೀಯ ಸಸ್ಯಗಳ ಪೂರೈಕೆಗೆ ಹೆಚ್ಚಿನ ಉತ್ತೇಜನ ನೀಡುವುದಲ್ಲದೇ ಈ ಅಭಿಯಾನವು ರೈತರ ಆದಾಯವನ್ನು ಹೆಚ್ಚಿಸಲು, ದೇಶದ ಔಷಧೀಯ ಸಸ್ಯಗಳ ಕ್ಷೇತ್ರದಲ್ಲಿ ಅಪಾರ ಸಾಮರ್ಥ್ಯದ ಪ್ರಯೋಜನ ಪಡೆದುಕೊಳ್ಳಲು ಮತ್ತು ಹಸಿರು ಭಾರತದ ಕನಸನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ. ದೇಶ ಔಶಧಿಯ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದರ ಜೊತೆಗೆ ಭಾರತೀಯ ವೈದ್ಯಪದ್ಧತಿ ಆಯುರ್ವೇದ ವಿಶ್ವದ ಆರೋಗ್ಯ ಕ್ಷೇತ್ರಕ್ಕೆ ನೆರವಾಗಲು ಬೆಂಬಲ ನೀಡಲಿದೆ.




ಈ ಶತಮಾನದ ಭಕ್ತಿಯ ಸಂದೇಶದ ಪಥ ಪ್ರವರ್ತಕರಾದರ. ಭಕ್ತಿ ಸಂದೇಶವನ್ನು ಜಗದಗಲ ಪಸರಿಸಿದವರು ಭಕ್ತಿವೇದಾಂತ ಶ್ರೀಲ ಪ್ರಭುಪಾದರು. ವಿಶ್ವದ ಜನತೆಗೆ ಕೃಷ್ಣ ಪ್ರಜ್ಞೆಯ ಮೂಲಕ ಭಕ್ತಿಯ ಮಾರ್ಗವನ್ನು ಬೋಧಿಸಿದ ಪ್ರಭುಪಾದರು ಭಾರತದ ಆಧ್ಯಾತ್ಮಿಕ ರಾಯಭಾರಿ. ಅವರ 125ನೇ ಜನ್ಮ ವರ್ಷಾಚರಣೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ವಿಶೇಷ ನಾಣ್ಯವನ್ನು ಹೊರತಂದಿದ್ದು ಇತ್ತೀಚೆಗೆ ಪ್ರಧಾನಿ ಮೋದಿ ಬಿಡುಗಡೆಗೊಳಿಸಿದರು.

ದೇಶದ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ ತಿರುಪತಿ ದೇವಾಲಯದ ಪ್ರಸಾದ ನೀಡಲು ಪರಿಸರಸ್ನೇಹಿ ಜೈವಿಕ ಚೀಲವೊಂದನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಅಭಿವೃದ್ಧಿ ಮಾಡಿದೆ. ಈವರೆಗೆ ದೇಗುಲಕ್ಕೆ ಭೇಟಿ ನೀಡುವ ಭಕ್ತರು ಪ್ಲಾಸ್ಟಿಕ್ ಚೀಲದಲ್ಲಿ ಪ್ರಸಾದಗಳನ್ನು ತೆಗೆದುಕೊಳ್ಳಬೇಕಿತ್ತು. ಈ ಜೈವಿಕ ಬ್ಯಾಗ್ 90 ದಿನಗಳೊಳಗೆ ಕರಗುತ್ತದೆ. ಹಾಗೆಯೇ ಜಾನುವಾರುಗಳು ತಿಂದರೂ ಹಾನಿಕಾರಕವಲ್ಲ. ದೇವಸ್ಥಾನದ ಲಡ್ಡು ಪ್ರಸಾದ ವಿತರಣೆ ಮಾಡುವ ಕೌಂಟರ್ ಬಳಿ ಟಿಟಿಡಿಯು ಈ ಚೀಲಗಳನ್ನು ಮಾರಾಟ ಮಾಡಲಿದೆ.

ಮಾಪಿಳ್ಳಾ ದಂಗೆಯ ನಾಯಕರನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಹುತಾತ್ಮರ ಪಟ್ಟಿಯಿಂದ ತೆಗೆದು ಹಾಕಲಾಗುವುದು ಎಂದು ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿಯು ಪ್ರಕಟಿಸಿದ ದಾಖಲೆಗಳನ್ನು ಪರಿಶೀಲನೆ ನಡೆಸಿದ ಮೂವರು ಸದಸ್ಯರ ಸಮಿತಿ ತಿಳಿಸಿದೆ. ಮಾಪಿಳ್ಳಾ ದಂಗೆಯಲ್ಲಿ ಮೃತಪಟ್ಟ ಇತರ 387 ಜನರನ್ನು ಸಹ ಹುತಾತ್ಮರ ಪಟ್ಟಿಯಿಂದ ತೆಗೆದು ಹಾಕಲಾಗುವುದು. ಈ ದಂಗೆಯ ಹಿಂದೆ ಖಿಲೀಫಾ ರಾಜ್ಯ ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಿತ್ತು. ಇದು ಮತಾಂತರದ ದಂಗೆಯ ಆಶಯವನ್ನು ಇಟ್ಟುಕೊಂಡು ನಡೆಸಿದ ಮೂಲಭೂತವಾದಿ ಚಳುವಳಿಯಾಗಿದೆ. ಇದು ಸ್ವಾತಂತ್ರ್ಯ ಹೋರಾಟದ ಭಾಗವಲ್ಲ ಎಂದು ಈ ಸಮಿತಿಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹತ್ಯಾಕಾಂಡದಲ್ಲಿ ಹೆಚ್ಚಿನ ಹಿಂದೂಗಳ ಹತ್ಯೆಯಾಗಿದೆ. ಅವರ ಆಶಯದಂತೆ ಖಿಲೀಫಾ ರಾಜ್ಯ ಸ್ಥಾಪನೆಯಾಗಿದ್ದ ಪಕ್ಷದಲ್ಲಿ ಭಾರತ ಆ ಭೂಭಾಗವನ್ನು ಕಳೆದುಕೊಳ್ಳಬೇಕಾಗಿ ಬರುತ್ತಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಹುತಾತ್ಮರ ಯಾದಿಯನ್ನು ಪರಿಶೀಲನೆ ನಡೆಸಿ, ಮಾರ್ಪಡಿಸಿ, ನವೀಕರಿಸಲಾದ ಯಾದಿಯನ್ನು ಅಕ್ಟೋಬರ್ ಅಂತ್ಯದೊಳಗಾಗಿ ಪ್ರಕಟಿಸಲಾಗುತ್ತದೆ ಎಂದು ಸಮಿತಿ ತಿಳಿಸಿದೆ.




ಭಾರತೀಯ ಸೇನೆಯು ಇದೇ ಮೊದಲ ಬಾರಿಗೆ ಐವರು ಮಹಿಳಾ ಅಧಿಕಾರಿಗಳನ್ನು ಕರ್ನಲ್ ದರ್ಜೆಯ ಬಡ್ತಿಗೆ ಆಯ್ಕೆ ಮಾಡಿದೆ. ಸೇನೆಯಲ್ಲಿ ಈ ವರೆಗೆ ಆರ್ಮಿ ವೈದ್ಯಕೀಯ ಕಾರ್ಪ್ಸ್, ಜಡ್ಜ್ ಅಡ್ವೊಕೇಟ್, ಆರ್ಮಿ ಶೈಕ್ಷಣಿಕ ಕಾರ್ಪ್ಸ್‌ಗಳ ಮಹಿಳಾ ಅಧಿಕಾರಿಗಳಿಗೆ ಮಾತ್ರ ಕರ್ನಲ್ ಶ್ರೇಣಿಯ ಬಡ್ತಿ ನೀಡಲಾಗುತ್ತಿತ್ತು. ಇದೀಗ ಸೇನೆಯ ಆಯ್ಕೆ ಮಂಡಳಿ ಐವರು ಮಹಿಳಾ ಅಧಿಕಾರಿಗಳನ್ನು ಕರ್ನಲ್ ದರ್ಜೆಗೆ ಬಡ್ತಿಗೆ ಆಯ್ಕೆ ಮಾಡಿದೆ. ಸೇನೆಯ ಸಿಗ್ನಲ್ ದಳದ ಲೆ. ಕರ್ನಲ್ ಸಂಗೀತಾ ಸರ್ದಾನಾ, ಇಎಂಇ ವಿಭಾಗದ ಲೆ. ಕರ್ನಲ್‌ಗಳಾದ ಸೋನಿಯಾ ಆನಂದ್ ಮತ್ತು ನವನೀತ್ ದುಗ್ಗಾಲ್, ಎಂಜಿನಿಯರಿಂಗ್ ಕಾರ್ಪ್ಸ್‌ನ ಲೆ. ಕರ್ನಲ್‌ಗಳಾದ ರೀನು ಖನ್ನಾ ಮತ್ತು ರಿಚಾ ಸಾಗರ್ ಅವರಿಗೆ ಕರ್ನಲ್ ಶ್ರೇಣಿಗೆ ಭಡ್ತಿ ನೀಡಲಾಗಿದೆ.

Date of Publication 10 SEPTEMBER 2021
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-09-2021

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಸಮರ್ಪಿತ ಸಾಮಾಜಿಕ ಕಾರ್ಯಕರ್ತ ಚಮನ್‌ಲಾಲ್‌ಜೀ ಸ್ಮರಣೆ




ಸಮರ್ಪಿತ ಸಾಮಾಜಿಕ ಕಾರ್ಯಕರ್ತ ಹಾಗೂ ಆರೆಸ್ಸೆಸ್ ಪ್ರಚಾರಕರೂ ಆಗಿದ್ದ ಮಾನನೀಯ ಚಮನ್‌ಲಾಲ್ ಅವರ ಜನ್ಮಶತಮಾನೋತ್ಸವ ಸ್ಮರಣಾರ್ಥ ಭಾರತೀಯ ಅಂಚೆ ಇಲಾಖೆ ಹೊರತಂದ ಅಂಚೆಚೀಟಿಯನ್ನು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಇತ್ತೀಚೆಗೆ ನವದೆಹಲಿಯಲ್ಲಿ ಬಿಡುಗಡೆ ಮಾಡಿದರು. 1920 ಮಾರ್ಚ್ 25ರಂದು ಸಿಯಾಲ್‌ಕೋಟ್ (ಇಂದು ಪಾಕಿಸ್ತಾನದಲ್ಲಿದೆ) ಜನಿಸಿದ ಚಮನ್‌ಲಾಲ್ ಅವರು ಸಣ್ಣ ವಯಸ್ಸಿನಲ್ಲೇ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡವರು. ಸುವರ್ಣ ಪದಕ ಗಳಿಸಿ ಉತ್ತಮ ವಿದ್ಯಾರ್ಹತೆ ಪಡೆದು ಅನೇಕ ಕೈತುಂಬ ಹಣನೀಡುವ ಉದ್ಯೋಗಗಳು ಅರಸಿ ಬಂದರೂ ಅವುಗಳನ್ನೆಲ್ಲ ತಿರಸ್ಕರಿಸಿ ಸಂಕಷ್ಟದಲ್ಲಿದ್ದ ಸಮಾಜಬಂಧುಗಳಿಗೆ ಮೂಲಭೂತ ಅಗತ್ಯಗಳನ್ನು ಒದಗಿಸುವ ಸೇವೆಗೆ ನಿಂತರು. ದೇಶದ ವಿಭಜನೆಯ ಸಂದರ್ಭದಲ್ಲಿ ನಿರಾಶ್ರಿತರಾಗಿ ತೀವ್ರ ಸಂಕಷ್ಟಗಳಲ್ಲಿ ಸಿಲುಕಿ ಪ್ರಾಣ ಉಳಿಸಿಕೊಂಡು ಭಾರತಕ್ಕೆ ವಲಸೆ ಬಂದ ಬಂಧುಗಳಿಗೆ ನೆರವಾಗುವಲ್ಲಿ ಚಮನ್‌ಲಾಲ್‌ಜೀ ನಿರ್ವಹಿಸಿದ ಪಾತ್ರ ಅತ್ಯಂತ ಹಿರಿದು. ಹಾಗೆಯೇ ಭಾರತದ ವಿದೇಶಾಂಗ ಸಂಬಂಧಗಳನ್ನು ರೂಪಿಸುವಲ್ಲಿ ಅವರ ಕೊಡುಗೆ ನೀಡಿದ್ದಾರೆ. ಆರೆಸ್ಸೆಸ್‌ನ ವೈಶ್ವಿಕ ಕಾರ್ಯ, ವಿದೇಶಗಳಿಗೆ ತೆರಳುವ ಭಾರತೀಯರಿಗೆ ನೆರವು, ಅಲ್ಲಿ ಸ್ವಯಂಸೇವಕ ಕಾರ್ಯದ ಬೆಳವಣಿಗೆ ಮೊದಲಾದವುಗಳಲ್ಲಿ ಅವರ ಕೊಡುಗೆ ಅಪಾರವಾದುದು.

## ಸ್ವಸ್ಥ ಗ್ರಾಮ ನಿರ್ಮಾಣದ ಕೈಂಕರ್ಯದಲ್ಲಿ ಗೂಳೂರು ಗ್ರಾಮ ಆರೋಗ್ಯ ಭಾರತಿ ತಂಡ

ತುಮಕೂರು ನಗರಕ್ಕೆ 7ಕಿಮೀ ಹತ್ತಿರದಲ್ಲೇ ಇರುವ ಗೂಳೂರು ಸ್ವಚ್ಛ-ಸ್ವಸ್ಥ ಗ್ರಾಮ ಆಗುವ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ತಮ್ಮ ಗೂಳೂರು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡುವುಬೇಕು ಎನ್ನುವ ದೃಢಸಂಕಲ್ಪದಿಂದ ಕಳೆದ 6 ವರ್ಷಗಳಿಂದ ಕಾರ್ಯಮಾಡುತ್ತಿರುವ "ಆರೋಗ್ಯ ಭಾರತಿ ಗೂಳೂರು" ತಂಡದ ನಿರಂತರ ಪರಿಶ್ರಮ.

ವೈಯಕ್ತಿಕ ಸ್ವಾಸ್ಥ್ಯ ಹಾಗೂ ಸ್ವಸ್ಥ ಪರಿವಾರಗಳ ನಿರ್ಮಾಣ, ತನ್ಮೂಲಕ ಆರೋಗ್ಯಪೂರ್ಣ ಸಮಾಜದ ನಿರ್ಮಾಣ ಆರೋಗ್ಯ ಭಾರತಿಯ ಮುಖ್ಯ ಉದ್ದೇಶ. ಗೋಳೂರು ಗ್ರಾಮದಲ್ಲಿ ಈ ಉದ್ದೇಶ ಸಾಕಾರಕ್ಕಾಗಿ ಚಿಕ್ಕ ಮಕ್ಕಳಿಂದ ಹಿಡಿದು ಮಹಿಳೆಯರು ಹಿರಿಯರು, ಎಲ್ಲ ವರ್ಗದ ಜನರು ಜೊತೆಗೂಡಿರುವ ಆರೋಗ್ಯ ಭಾರತಿ ತಂಡ ಕಾರ್ಯ ನಿರ್ವಹಿಸುತ್ತಿದೆ.




ಕಳೆದ ಆರು ವರ್ಷಗಳಿಂದ ನಿರಂತರವಾಗಿ ಆರೋಗ್ಯ ಭಾರತಿ ವತಿಯಿಂದ ಪ್ರತಿದಿನ ಯೋಗ ಶಾಖೆ ನಡೆಯುತ್ತಿದೆ. ಬೆಳಿಗ್ಗೆ 6 ರಿಂದ ಗೂಳೂರಿನ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಅನೇಕ ಯೋಗ ಬಂಧುಗಳು ಯೋಗಾಭ್ಯಾಸದಲ್ಲಿ ನಿರತರಾಗಿರುತ್ತಾರೆ. ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಯೋಗ ಒಂದು ಅತ್ಯಮೂಲ್ಯ ಸಾಧನ. ದೇಹ ಮತ್ತು ಮನಸ್ಸಿನ ನಿಯಂತ್ರಣಕ್ಕೆ ಯೋಗ ಸಹಕಾರಿ. ಸರಿಯಾದ ಉಸಿರಾಟದ ಜೊತೆಗೆ ಮಾಡುವ ಆಸನಗಳು ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ರೋಗದಿಂದ ಯೋಗದ ಕಡೆಗೆ ನಮ್ಮ ಜೀವನ ಸಾಗಬೇಕಿದೆ. ಈ ನಿಟ್ಟಿನಲ್ಲಿ ಆರೋಗ್ಯ ಭಾರತಿ ಗೂಳೂರು ತಂಡ ಯೋಗ ಜೀವನ ಕಲೆಯನ್ನು ಗ್ರಾಮಸ್ಥರಿಗೆ ತಿಳಿಸುವ ಕೆಲಸ ಮಾಡುತ್ತಿದೆ.

ಕಳೆದ ಐದು ವರ್ಷಗಳಿಂದ ನಿರಂತರವಾಗಿ ಮಳೆಗಾಲದ ಮುನ್ನ ಗೂಳೂರು ಗ್ರಾಮದ ಕಲ್ಯಾಣಿ ಸ್ವಚ್ಛತೆ ಮಾಡುವ ಶ್ರಮದಾನ ನಡೆಯುತ್ತಿದೆ. ಐದು ವರ್ಷದ ಹಿಂದೆ ಈ ಕಲ್ಯಾಣಿ ಹೂಳು, ಕಳೆ, ಮುಳ್ಳು ಗಿಡಗಂಟೆಗಳಿಂದ ಪಾಳು ಬಿದ್ದಿತ್ತು. ಸತತ 8 ಭಾನುವಾರ, 20ಕ್ಕೂ ಹೆಚ್ಚು ಯುವಕರ ಶ್ರಮದಾನದ ಫಲವಾಗಿ ಗೋಳೂರು ಕಲ್ಯಾಣಿ ಶುಚಿಯಾದವು. ತದನಂತರ ಪ್ರತಿವರ್ಷ ಆರೋಗ್ಯ ಭಾರತಿ ಕಾರ್ಯಕರ್ತರು ತಪ್ಪದೇ ವರ್ಷಕ್ಕೊಮ್ಮೆ ಇದನ್ನು ಸ್ವಚ್ಛ ಮಾಡುತ್ತಿದ್ದಾರೆ. ಇದರ ಫಲವಾಗಿ ಕಲ್ಯಾಣಿ ಮಳೆ ನೀರಿನಿಂದ ತುಂಬಿರುತ್ತದೆ.

ಮನೆಮದ್ದು ಮತ್ತು ಔಷಧಿ ಸಸ್ಯಗಳ ಪರಿಚಯ, ಸಂಸ್ಕಾರವಂತ ಸಮಾಜ ನಿರ್ಮಾಣದಲ್ಲಿ ಬಹು ಮುಖ್ಯ ಪಾತ್ರ ವಹಿಸುವ ಸಂಸ್ಕೃತ ಸಂಭಾಷಣಾ ಶಿಬಿರ, ಗ್ರಾಮಸ್ಥರಿಗೆ ಪುಣ್ಯ ಕ್ಷೇತ್ರಗಳ ದರ್ಶನ ಪ್ರವಾಸ, ವಾರ್ಷಿಕ ಸಸಿ ನೆಡುವ ಕಾರ್ಯಕ್ರಮ ಹಾಗೂ ನೆಟ್ಟ ಸಸಿಗಳ ರಕ್ಷಣೆ-ಪೋಷಣೆಗಳತ್ತ ಸತತ ಗಮನ, ದೇವಸ್ಥಾನಗಳ ಶುಚಿತ್ವ ಕಾಪಾಡುವ ನಿಟ್ಟಿನಲ್ಲಿ ಗ್ರಾಮದ ದೇಗುಲಗಳಲ್ಲಿ ನಿಯಮಿತ ಸ್ವಚ್ಛತಾ ಕಾರ್ಯ ಹೀಗೆ ಸ್ವಸ್ಥ ಗ್ರಾಮ ನಿರ್ಮಾಣಕ್ಕೆ ಪೂರಕವಾಗುವ ಅನೇಕ ಚಟುವಟಿಕೆಗಳನ್ನು ಆರೋಗ್ಯ ಭಾರತಿ ತಂಡ ಕೈಗೊಳ್ಳುತ್ತಿದೆ.

ಕೋವಿಡ್ ಸಂಕಷ್ಟದ ಸಮಯದಲ್ಲಿ ಗೂಳೂರು ಆರೋಗ್ಯ ಭಾರತಿ ತಂಡದ ವೈದ್ಯರು ತುಮಕೂರು ಸೇವಾ ಭಾರತಿಯ ಸಹಯೋಗದೊಂದಿಗೆ ಸಹಾಯವಾಣಿ ಆರಂಭಿಸಿ ಸಕ್ರಿಯವಾಗಿ ಕೆಲಸ ಮಾಡಿ, ಜಿಲ್ಲೆಯ ನೂರಾರು ಜನರಿಗೆ ಉಚಿತವಾಗಿ ವೈದ್ಯಕೀಯ ಸಲಹೆ, ಆಪ್ತ ಸಮಾಲೋಚನೆ, ವೈದ್ಯಕೀಯ ನೆರವು ನೀಡಿದರು.

ಆರೋಗ್ಯ ಭಾರತಿ ಗೂಳೂರು ತಂಡದ ಸೇವಾ ಚಟುವಟಿಕೆಗಳಿಂದ ಸ್ಫೂರ್ತಿ ಪಡೆದು ರಾಜ್ಯದ ಸುಮಾರು 8–10 ಹಳ್ಳಿಗಳಲ್ಲಿ ಇದೇ ತರಹದ ಮಾದರಿಯಲ್ಲಿ ಸೇವಾ ಕಾರ್ಯಗಳು ನಡೆಯುತ್ತಿವೆ ಎಂಬುದು ಹೆಮ್ಮೆ ಸಂಗತಿಯಾಗಿದೆ. ಸಂಸ್ಕಾರ, ಸಂಘಟನೆ ಮತ್ತು ಸೇವೆಯ ಧ್ಯೇಯೋದ್ದೇಶದಿಂದ ಗೋಳೂರು ಗ್ರಾಮದ ಆರೋಗ್ಯ ಭಾರತಿಯ ತಂಡ ನಡೆಸುವಂತಹ ಚಿಕ್ಕ ಪುಟ್ಟ ಕೆಲಸಗಳು ನಮ್ಮ ಸಮಾಜದ ಆರೋಗ್ಯ ವೃದ್ಧಿಸುವಲ್ಲಿ ಸಹಕಾರಿಯಾಗಿವೆ.




1ನೇ ಪುಟದಿಂದ

ಪ್ರಮುಖ ಧರ್ಮಗುರುಗಳಲ್ಲಿ ಒಬ್ಬನಾದ ಮಾಮೌನ್ ಹಟೆಮ್ ಐಸಿಸ್‌ಗೆ ಬೆಂಬಲ ನೀಡುವುದಿಲ್ಲ ಎಂದು ಘೋಷಿಸಿದ್ದರೂ, ಭಯೋತ್ಪಾದನಾ ಚಟುವಟಿಕೆಗಳಲ್ಲಿ ಈ ಎಲ್ಲಾ ಗುಂಪುಗಳ ನಡುವೆ ಪರಸ್ಪರ ಒಳಒಪ್ಪಂದವಾಗಿದೆ ಎಂಬುದು ಈಗ ಎಲ್ಲರಿಗೂ ತಿಳಿದ ಬಹಿರಂಗ ರಹಸ್ಯವಾಗಿದೆ. ಈ ಎಲ್ಲಾ ಧಾರ್ಮಿಕ ಸಂಘಟನೆಗಳು, ರಾಜಕೀಯ ಸಂಘಟನೆಗಳು, ಪ್ರಪಂಚದಾದ್ಯಂತ ನಾಯಿಕೊಂಡೆಯಂತೆ ಹರಡಿಕೊಂಡಿರುವುದಲ್ಲದೇ ಅಲ್ಲಿ ತಮ್ಮ ಜಿಹಾದಿ ಸಿದ್ಧಾಂತದ ಮೂಲಕ ಇಸ್ಲಾಮಿಕ್ ಸಾಮ್ರಾಜ್ಯವನ್ನು ಸ್ಥಾಪಿಸುವ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಗುರಿಯನ್ನು ಹೊಂದಿವೆ. ಅಮೇರಿಕಕ್ಕೆ ನೀಡಿದ್ದ ಭರವಸೆಯನ್ನು ಮೀರಿ, ತಾಲಿಬಾನ್ ಈಗಾಗಲೇ ತನ್ನದು ಇಸ್ಲಾಮಿಕ್ ದೇಶ ಎಂದು ಘೋಷಿಸಿಕೊಂಡಿದೆ. ಶತ್ರುವಿನ ಶತ್ರು ತಮ್ಮ ಮಿತ್ರ ಎಂಬ ಮಾತಿನಂತೆ, ಭಾರತದಲ್ಲಿನ ಎಡಪಂಥೀಯ ಉದಾರವಾದಿಗಳು ಎಂದು ಕರೆದುಕೊಳ್ಳುವ, ಸ್ವಘೋಷಿತ ಬುದ್ಧಿಜೀವಿಗಳು, ನಗರ ನಕ್ಸಲರು ಮತ್ತು ಕೆಲವು ಪೂರ್ವಾಗ್ರಹಪೀಡಿತ ಮಾಧ್ಯಮ ಸಂಸ್ಥೆಗಳು ಹಾಗೂ ಕೆಲವು ನಿರುದ್ಯೋಗಿ ರಾಜಕಾರಣಿಗಳು ಈ ನಡೆಯನ್ನು ಸ್ವಾಗತಿಸಿರುವುದು ರಾಷ್ಟ್ರೀಯ ಭದ್ರತೆ ಮತ್ತು ಸಮಗ್ರತೆಯ ದೃಷ್ಟಿಯಿಂದ ಆತಂಕಕಾರಿಯಾಗಿದೆ.

ಇದನ್ನು ಗಮನಿಸಿದರೆ, ಇವರೆಲ್ಲರ ರಾಜಕೀಯ ಚಟುವಟಿಕೆ ಮತ್ತು ಹೋರಾಟಗಳನ್ನು ಇನ್ನು ಮುಂದೆ ಕೇವಲ ಸಾಮಾನ್ಯ ರೀತಿಯ ಹೋರಾಟ ಎಂದು ಭಾವಿಸದೇ, ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳ ಬೆಂಬಲಿತ ಹೋರಾಟ ಎಂದೇ ಪರಿಗಣಿಸಬೇಕಾಗುತ್ತದೆ. ಇವರೆಲ್ಲರ ಆಟಾಟೋಪಗಳು ಜಾಗತಿಕ ಜಿಹಾದಿ ಚಳವಳಿಯ ಅಂಗವಾಗಿದ್ದು ಪ್ರಪಂಚದಾದ್ಯಂತ ಹರಡಿಕೊಂಡಿರುವ ಭಯೋತ್ಪಾದನೆಯ ಸಂಘಟಿತ ಕೃತ್ಯಗಳ ಭಾಗವಾಗಿದೆ ಎಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಈ ಎಲ್ಲಾ ಭಯೋತ್ಪಾದಕ ಗುಂಪುಗಳು ಒಂದಕ್ಕೊಂದು ಸಂಬಂಧ ಹೊಂದಿದ್ದು ಭಯೋತ್ಪಾದನಾ ಚಟುವಟಿಕೆಗಳಿಗೆ ಮತ್ತು ಕೋಮುಸಂಘರ್ಷ ಸೃಷ್ಟಿಸಲು ಪರಸ್ಪರ ಬೆಂಬಲಿಸುತ್ತಿವೆ. ಈ ಉಗ್ರಸಂಘಟನೆಗಳ ನಿಜಸ್ವರೂಪವನ್ನು ಇಡೀ ಜಗತ್ತು ಬೇಗ ತಿಳಿದಷ್ಟು ಒಳ್ಳೆಯದು. ಎಲ್ಲಾ ರಾಷ್ಟ್ರಗಳು ಒಂದಾಗಿ ಈ ಸಂಘಟನೆಗಳ ವಿರುದ್ಧ ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ಸ್ಪಷ್ಟವಾದ ಕಾರ್ಯತಂತ್ರದೊಂದಿಗೆ ಹೋರಾಡಿದರ ಮಾತ್ರ ಶಾಶ್ವತವಾದ ಪರಿಹಾರವನ್ನು ಕಂಡುಕೊಂಡು ವಿಶ್ವ ಶಾಂತಿಯನ್ನು ಕಾಪಾಡಲು ಸಾಧ್ಯವಾದೀತು.

(ಲೇಖಕರು: ಮದನ್ ಗೋಪಾಲ್, ನಿವೃತ್ತ ಐಎಎಸ್ ಅಧಿಕಾರಿ)



ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.